KAHS610000662022

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.</u>**

**ಉಪಸ್ಥಿತರುಃ**
**ಶ್ರೀಮತಿ ಕುಸುಮ.ವಿ. ಬಿ.ಎ.ಎಲ್. ಎಲ್.ಎಲ್.ಬಿ.**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನರಾಯಪಟ್ಟಣ.**

**ದಿನಾಂಕಃ 02 ನೇ ಏಪ್ರಿಲ್ ಮಾಹೆ 2026 ರಂದು**

**<u>ಸಿ.ಸಿ. ನಂ.17/2022</u>**

**ಫಿರ್ಯಾದಿ** : ಚನ್ನರಾಯಪಟ್ಟಣ ಅಬಕಾರಿ ಪೋಲೀಸ್ ಠಾಣೆ.

**(ಪರಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು)**

**:: ವಿರುದ್ಧ ::**

**ಆರೋಪಿ** : ಏಷಕಂಠೇಗೌಡ,
ಬಿನ್ ನಂಜುಂಡೇಗೌಡ,
ವಯಸ್ಸು ಸುಮಾರು 52 ವರ್ಷ,
ವಾಸಃ ಕುರುವಂಕ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**(ಪರವಾಗಿ ಶ್ರೀ ಜಿ.ಆರ್.ಜಿ., ವಕೀಲರು)**

## ಃ ತೀರ್ಪು ಃ

ಚನ್ನರಾಯಪಟ್ಟಣ ಅಬಕಾರಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ **1965** ರ ಕಲಂ. **14** ಮತ್ತು **15** ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ **32(1)** ಮತ್ತು **38(ಎ)** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದಾರೆಂದು ದೋಷರೋಪಣೆ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

### ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ವಿವರಣೆ ಃ

**2.** ಅಭಿಯೋಜನೆಯ ಪ್ರಕರಣವೇನೆಂದರೆ, ದಿನಾಂಕಃ **09.06.2021** ರಂದು ಮಧ್ಯಾಹ್ನ **3.30** ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕುರುವಂಕ ಗ್ರಾಮದಲ್ಲಿ ಆರೋಪಿಗೆ ಸೇರಿದ ಚಿಲ್ಲರೆ ಅಂಗಡಿಯ ಮೇಲೆ ಅಬಕಾರಿ ದಾಳಿ ನಡೆಸಿದಾಗ ಒಟ್ಟು **5.040** ಲೀಟರ್ ಸ್ವದೇಶಿ ಮದ್ಯವನ್ನು ಸಂಗ್ರಹಣೆ ಮಾಡಿ ಮಾರಾಟ ಮಾಡುತ್ತಿರುವುದು ಕಂಡುಬಂದಿರುವುದು ತನಿಖೆಯಿಂದ ದೃಢಪಟ್ಟಿರುವುದರಿಂದ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

**3.** ನ್ಯಾಯಾಲಯ ಈ ಮೇಲೆ ಹೇಳಿದ ಆರೋಪಣೆಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸ್ ಆದೇಶ ಮಾಡಿದ್ದು ಇರುತ್ತದೆ. ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡು ಸೂಕ್ತ ಬಂಧ ಪತ್ರ ನೀಡಿದ್ದು ಇರುತ್ತದೆ. ತದನಂತರ ದೋಷಾರೋಪಣ ಪಟ್ಟಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ **207** ರಂತೆ ಆರೋಪಿಗೆ ನೀಡಿದ್ದು, ದೋಷಾರೋಪಣೆಯನ್ನು ರಚಿಸಿದ್ದು ಇರುತ್ತದೆ. ಆ ನಂತರ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು ಇರುತ್ತದೆ. ಸದರಿ ದೋಷಾರೋಪಣೆಯನ್ನು ಆರೋಪಿ ಅಲ್ಲಗಳೆದಿದ್ದು ಇರುತ್ತದೆ. ತದನಂತರ ಮೇಲ್ಕಂಡ ಆರೋಪಣೆಗಳನ್ನು ನಿಸ್ಸಂಶಯವಾಗಿ ಆರೋಪಿ ವಿರುದ್ಧ ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಚಾ.ಸಾ.**1, 2, 3, 5** ಮತ್ತು **6** ರವರನ್ನು ಪ್ರಾಸಾ.**1** ರಿಂದ **5** ಅಂತ

ಸಾಕ್ಷಿ ಮಾಡಿಸಿ ಅವರ ಪರ ನಿಪಿ.1 ರಿಂದ 15 ದಾಖಲಾತಿಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿದ್ದು ಇರುತ್ತದೆ ಹಾಗೂ ಮಾಲನ್ನು ಮು.ಮಾ.1 ಎಂದು ಗುರುತಿಸಿಕೊಂಡಿರುತ್ತದೆ. ತದನಂತರ ಸಾಕ್ಷಿದಾರರ ಸಾಕ್ಷ್ಯದಿಂದ ಆರೋಪಿ ವಿರುದ್ದವಾಗಿ ಸಾಕ್ಷ್ಯ ಕಂಡು ಬಂದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿ ಆರೋಪಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಆರೋಪಿ ತನ್ನ ಪರ ಯಾವುದೇ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

**4.** ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ಅಹವಾಲನ್ನು ಆಲಿಸಿ ಈ ಪ್ರಕರಣವನ್ನು ನಿಖಾಲೆಗೊಳಿಸುವ ಉದ್ದೇಶದಿಂದ ಈ ಕೆಳಕಂಡಂತೆ ಅಂಶಗಳನ್ನು ರಚಿಸಿರುತ್ತೇನೆ.

**ಃ ಅಂಶಗಳು ಃ**

1. ದಿಃ **09.06.2021** ರಂದು ಮಧ್ಯಾಹ್ನ **3.30** ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಅಬಕಾರಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಕಸಬಾ ಹೋಬಳಿ, ಕುರುವಂಕ ಗ್ರಾಮದಲ್ಲಿ ಆರೋಪಿಗೆ ಸೇರಿದೆ ಎನ್ನಲಾದ ಚಿಲ್ಲರೆ ಅಂಗಡಿಯಲ್ಲಿ ಒಟ್ಟು **5.040** ಲೀಟರ್ ಸ್ವದೇಶಿ ಮದ್ಯವನ್ನು ಯಾವುದೇ ಪರವಾನಿಗೆ ಇಲ್ಲದೆ ಸ್ವಾಧೀನ ಹೊಂದಿದ್ದು, ಆ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ. **14 ಮತ್ತು 15 ನಿಯಮವನ್ನು ಉಲ್ಲಂಘಿಸಿ, ಇದೇ ಕಾಯ್ದೆ ಕಲಂ.32(1)** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತುಪಡಿಸುತ್ತಾರೆಯೇ?
2. ಎರಡನೆಯದಾಗಿ, ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಯಾವುದೇ ಪರವಾನಿಗೆ ಇಲ್ಲದೇ, ಮಧ್ಯವನ್ನು ಇಟ್ಟುಕೊಳ್ಳಬಾರದು ಎಂದು ತಿಳಿದಿದ್ದರೂ, ನಿಮಗೆ ಸೇರಿದ ಚಿಲ್ಲರೆ ಅಂಗಡಿಯಲ್ಲಿ ಮೇಲೆ ಹೇಳಿದಂತೆ ಮಧ್ಯವನ್ನು ಇಟ್ಟುಕೊಂಡಿದ್ದು,

ಆ ಮೂಲಕ ಆರೋಪಿಯು **ಕರ್ನಾಟಕ ಅಬಕಾರಿ ಕಾಯಿದೆ ಕಲಂ. 38(ಎ) ರ ಅಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತುಪಡಿಸುತ್ತಾರೆಯೇ?

3. ಯಾವ ಆದೇಶ?

**5.** ಪ್ರಕರಣದಲ್ಲಿ ಲಭ್ಯವಿರುವ ನುಡಿಸಾಕ್ಷ್ಯ ಹಾಗೂ ದಾಖಲಾತಿ ಸಾಕ್ಷ್ಯ ಮತ್ತು ಅಹವಾಲಿನ ಆಧಾರದ ಮೇಲೆ ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಕಾರಣಗಳನ್ನು ನೀಡಿ ಉತ್ತರಿಸುತ್ತೇನೆ.

**ಅಂಶ 1 ಮತ್ತು 2 : ನಕಾರಾತ್ಮಕವಾಗಿ**

**ಅಂಶ 3 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ**

## :: ಕಾರಣಗಳು ::

**6.** **ಅಂಶ ಸಂಖ್ಯೆ – 1 ಮತ್ತು 2 :** ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎರಡೂ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**7.** ಅಭಿಯೋಜನೆಯ ಪ್ರಕರಣವೇನೆಂದರೆ, ದಿನಾಂಕಃ **09.06.2021** ರಂದು ಮಧ್ಯಾಹ್ನ **3.30** ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕುರುವಂಕ ಗ್ರಾಮದಲ್ಲಿ ಆರೋಪಿಗೆ ಸೇರಿದೆ ಎನ್ನಲಾದ ಚಿಲ್ಲರೆ ಅಂಗಡಿಯ ಮೇಲೆ ಅಬಕಾರಿ ದಾಳಿ ನಡೆಸಿದಾಗ ಒಟ್ಟು **5.040** ಲೀಟರ್ ಸ್ವದೇಶಿ ಮಧ್ಯವನ್ನು ಸಂಗ್ರಹಣೆ ಮಾಡಿ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ ಎಂಬುದಾಗಿದೆ.

**8.** ಸದರಿ ಆರೋಪಣೆಗಳನ್ನು ನಿಸ್ಸಂಶಯವಾಗಿ ನ್ಯಾಯಾಲಯದ ಮುಂದೆ ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 09.06.2021 ರಂದು ಮಧ್ಯಾಹ್ನ 3.15 ಗಂಟೆಯಲ್ಲಿ ಚನ್ನರಾಯಪಟ್ಟಣದ ಕುರುವಂಕ ಗ್ರಾಮದ ದ್ವಾರದಲ್ಲಿ ಕೋವಿಡ್ ಸಂಬಂಧ ತಾನು, ಚಾಸಾ-4, 5 ರವರು ಗಸ್ತು ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು ಕುರುವಂಕ ಗ್ರಾಮದ ವಿಷಕಂಠೇಗೌಡ ಬಿನ್ ನಂಜುಂಡೇಗೌಡ ಎಂಬುವವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಸಂಗ್ರಹಿಸಿಟ್ಟಿರುತ್ತಾರೆ ಎಂದು ಮಾಹಿತಿ ನೀಡಿದ್ದು, ತಾವು ಆ ವ್ಯಕ್ತಿಯನ್ನು ಪಂಚನಾಗಿ ಸಹಕರಿಸುವಂತೆ ಕೇಳಿದಾಗ, ಆತ ನಿರಾಕರಿಸಿರುತ್ತಾನೆ. ನಂತರ ಕುರುವಂಕ ಗ್ರಾಮದ ಒಳಗೆ ಬಂದು ಅಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳಿಗೆ ತಮ್ಮ ಪರಿಚಯ ಮಾಡಿ, ವಿಚಾರಗಳನ್ನು ತಿಳಿಸಿ, ಪಂಚರಾಗಿ ಬರುವಂತೆ ತಿಳಿಸಿ ನೋಟೀಸನ್ನು ನೀಡಲಾಗಿ, ಅವರು ಅದಕ್ಕೆ ಒಪ್ಪಿ, ಅವರ ಸಹಾಯದಿಂದಲೇ ತಾವು ಆರೋಪಿಯ ಅಂಗಡಿಯ ಬಳಿ ಹೋಗಿರುತ್ತೇವೆ. ಅಲ್ಲಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ, ಓಡಲು ಪ್ರಾರಂಭಿಸಿದ್ದು, ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಲಾಗಿ, ಆತ ಸಿಕ್ಕಿರುವುದಿಲ್ಲ, ನಂತರ ಸದರಿ ಅಂಗಡಿಯ ಒಳಗೆ ಹೋಗಿ ನೋಡಲಾಗಿ, ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇದ್ದು, ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್‌ಗಳು ತುಂಬಿರುವುದು ಕಂಡುಬಂದಿದ್ದು, ಅವುಗಳನ್ನು ತೆಗೆದು ನೋಡಲಾಗಿ, ಅದರಲ್ಲಿ ಸುಮಾರು 90 ಎಂ.ಎಲ್ ನ ಎಂ.ಸಿ.ನಂ.1 ತ್ರಿಬಲ್ ಎಕ್ಸ್ ರಂ ಎಂಬ ಹೆಸರಿಗೆ 56 ಟೆಟ್ರಾ ಪ್ಯಾಕೆಟ್‌ಗಳು ಇರುವುದು ಕಂಡುಬಂದಿರುತ್ತದೆ. ಅವುಗಳ ಬಗ್ಗೆ ಯಾವುದೇ ಪರವಾನಿಗೆ ಇರುವುದಿಲ್ಲ. ನಂತರ ಅವುಗಳನ್ನು ಪಂಚರ ಸಮಕ್ಷಮ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ನಂತರ ಮುದ್ದೆ ಮಾಲುಗಳ ಜೊತೆ ಠಾಣೆಗೆ ಹಾಜರಾಗಿ ಆರೋಪಿಯ ವಿರುದ್ದ ಪ್ರ.ವ ವರದಿಯನ್ನು ತಯಾರಿಸಿರುತ್ತೇನೆ ಎಂದು ನುಡಿದಿರುತ್ತಾರೆ.

**9.** ಪ್ರಾಸಾ.1 ರವರು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿದ್ದು, ಮುಂದುವರೆದು ದಿಃ 13.04.2020 ರಂದು ಕೋರೋನಾ ಸೊಂಕು ತೀವ್ರವಾಗಿತ್ತು ಎಂಬುದನ್ನು ಒಪ್ಪುತ್ತಾರೆ ಅಲ್ಲದೆ ಮುದ್ದೆಮಾಲು.1 ರ ಮೇಲೆ ಸಂಖ್ಯೆಗಳು ಅಸ್ಪಷ್ಟವಾಗಿ ಇರುವುದರಿಂದ ಅದು ಯಾವ ಅಂಗಡಿಯಿಂದ ಖರೀದಿಸಲಾಯಿತು ಎಂಬುದನ್ನು ಪರಿಶೀಲೀಸಿಲ್ಲ ಎಂಬುದನ್ನು ಒಪ್ಪುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಸರ್ಕಾರಿ ಅಧಿಕಾರಿಯಾಗಿದ್ದು, ಸದರಿ ಸಾಕ್ಷ್ಯದಿಂದ ಆರೋಪಿಯ ಮೇಲೆ ಹೊರಿಸಲಾಗಿರುವ ಆರೋಪವನ್ನು ಸಾಬೀತುಪಡಿಸಲಾಗಿರುವುದಿಲ್ಲ.

**10.** ಚಾಸಾ.2 ಮತ್ತು 3 ರವರನ್ನು ಪ್ರಾಸಾ.2 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಮಹಜರ್ ಸಾಕ್ಷಿದಾರರಾಗಿದ್ದು ತಾವು ಮಹಜರ್ ನಲ್ಲಿರುವ ಸಹಿಯನ್ನು ಸುಮಾರು 2 ವರ್ಷಗಳ ಹಿಂದೆ ಅಬಕಾರಿ ಕಛೇರಿಯಲ್ಲಿ ಮಾಡಿರುತ್ತೇನೆ. ಯಾವ ಉದ್ದೇಶಕ್ಕೆ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿಯವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಸದರಿಯವರು ಪ್ರತಿಕೂಲ ಸಾಕ್ಷಿಯಾಗಿದ್ದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**11.** ಚಾಸಾ.5 ರವರನ್ನು ಪ್ರಾಸಾ.4 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಚಾಸಾ.1 ರವರಿಗೆ ಸಹಕರಿಸಿದ ಸಾಕ್ಷಿದಾರರಾಗಿದ್ದು, ದಿಃ 09.06.2021 ರಂದು ಮಧ್ಯಾಹ್ನ 3.00 ಗಂಟೆಯಲ್ಲಿ ಚನ್ನರಾಯಪಟ್ಟಣದ ಕುರುವಂಕ ಗ್ರಾಮದ ದ್ವಾರದಲ್ಲಿ ಕೋವಿಡ್ ಸಂಬಂಧ ತಾನು, ಚಾಸಾ-1, 4 ರವರು ಗಸ್ತು ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು ಕುರುವಂಕ ಗ್ರಾಮದ ವಿಷಕಂಠೇಗೌಡ ಬಿನ್ ನಂಜುಂಡೇಗೌಡ ಎಂಬುವವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಸಂಗ್ರಹಿಸಿಟ್ಟಿರುತ್ತಾರೆ ಎಂದು ಮಾಹಿತಿ ನೀಡಿದ್ದು, ತಾವು ಆ ವ್ಯಕ್ತಿಯನ್ನು

ಪಂಚನಾಗಿ ಸಹಕರಿಸುವಂತೆ ಕೇಳಿದಾಗ, ಆತ ನಿರಾಕರಿಸಿರುತ್ತಾನೆ. ನಂತರ ಕುರುವಂಕ ಗ್ರಾಮದ ಒಳಗೆ ಬಂದು ಅಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳಿಗೆ ತಮ್ಮ ಪರಿಚಯ ಮಾಡಿ, ವಿಚಾರಗಳನ್ನು ತಿಳಿಸಿ, ಪಂಚರಾಗಿ ಬರುವಂತೆ ತಿಳಿಸಿ ನೋಟೀಸನ್ನು ನೀಡಲಾಗಿ, ಅವರು ಅದಕ್ಕೆ ಒಪ್ಪಿ, ಅವರ ಸಹಾಯದಿಂದಲೇ ತಾವು ಮಾಹಿತಿ ಬಂದ ವ್ಯಕ್ತಿಯ ಮನೆಯ ಬಳಿ ಹೋಗುತ್ತಿರುವಾಗಲೇ ಅಲ್ಲಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ, ಓಡಲು ಪ್ರಾರಂಭಿಸಿದ್ದು, ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಲಾಗಿ, ಆತ ಸಿಕ್ಕಿರುವುದಿಲ್ಲ. ಸದರಿ ಅಂಗಡಿಯ ಒಳಗೆ ಹೋಗಿ ನೋಡಲಾಗಿ, ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇದ್ದು, ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್‌ಗಳು ತುಂಬಿರುವುದು ಕಂಡುಬಂದಿದ್ದು, ಅವುಗಳನ್ನು ತೆಗೆದು ನೋಡಲಾಗಿ, ಅದರಲ್ಲಿ ಸುಮಾರು **90** ಎಂ.ಎಲ್ ನ ಎಂ.ಸಿ.ನಂ.**1** ತ್ರಿಬಲ್ ಎಕ್ಸ್ ರಂ ಎಂಬ ಹೆಸರಿಗೆ **56** ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡುಬಂದಿರುತ್ತದೆ. ಅವುಗಳ ಬಗ್ಗೆ ಯಾವುದೇ ಪರವಾನಿಗೆ ಇರುವುದಿಲ್ಲ, ಈಗಾಗಿ ಚಾಸಾ.**1** ರವರು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ದಿಃ **03.08.2021** ರಲ್ಲಿ ರಾಸಾಯನಿಕ ಪರೀಕ್ಷೆಯ ವರದಿಯನ್ನು ಚಾಸಾ.**6** ರವರಿಗೆ ತಂದು ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

**12.** ಪ್ರಾಸಾ.**4** ರವರು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಸದರಿಯವರು ಚಾಸಾ.**1** ರವರು ದಾಳಿ ಸಮಯದಲ್ಲಿ ತಾನು ಹಾಜರಿದ್ದು, ಅವರ ಆದೇಶದ ಮೇರೆಗೆ ಕಾರ್ಯ ನಿರ್ವಹಿಸಿರುವ ಬಗ್ಗೆ ನುಡಿದಿರುತ್ತಾರೆ. ಸದರಿಯವರು ಚಾಸಾ.**1** ರವರ ಆದೇಶದ ಮೇರೆಗೆ ಕಾರ್ಯ ನಿರ್ವಹಿಸಿರುವುದರಿಂದ ಸದರಿಯವರ ಸಾಕ್ಷ್ಯದಿಂದ ಆರೋಪಿಯ ಆರೋಪವನ್ನು ಸಾಬೀತುಪಡಿಸಲಾಗುವುದಿಲ್ಲ.

**13.** ಚಾಸಾ.**6** ರವರನ್ನು ಪ್ರಾಸಾ.**5** ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.**5** ರವರು ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ತಾವು ತನಿಖೆಯನ್ನು ಕೈಗೊಂಡ

ಬಗ್ಗೆ ಮತ್ತು ದೋಷಾರೊಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ.

**14.** ಈ ಪ್ರಕರಣದಲ್ಲಿ ಅಭಿಯೋಜನೆಯು ಪ್ರಾಸಾ.1, 4 ಮತ್ತು 5 ರವರುಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಇಲಾಖಾ ಸಿಬ್ಬಂದಿಯವರೇ ಆಗಿದ್ದು, ಸದರಿಯವರು ತಾವು ಕೈಗೊಂಡ ತನಿಖೆಯ ಕಾಲದಲ್ಲಿ ವಶಪಡಿಸಿಕೊಂಡ ಮು.ಮ.1 ಬಗ್ಗೆ ನುಡಿದಿದ್ದು, ಪ್ರಾಸಾ.1 ರವರು ದಾಳಿ ಸಮಯದಲ್ಲಿ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯದೇ ದಾಳಿ ನಡೆಸಿದ್ದು, ಇದು ನಿಯಮದ ಉಲ್ಲಂಘನೆ ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೇ ಪ್ರಾಸಾ.2 ಮತ್ತು 3 ರವರನ್ನು ದಾಳಿ ಸಮಯದಲ್ಲಿ ಪಂಚರನ್ನಾಗಿ ಬರಮಾಡಿಕೊಂಡಿದ್ದು, ಸದರಿಯವರು ತಮಗೆ ಯಾವುದೇ ವಿಚಾರಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಸದರಿಯವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿದ್ದು, ಅಭಿಯೋಜನಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಆದ್ದರಿಂದ ಲಭ್ಯವಿರುವ ದೋಷಾರೋಪಣ ಪಟ್ಟಿ ಮತ್ತು ನಿಪಿ.1 ರಿಂದ 15 ಮು.ಮಾ.1 ಹಾಗೂ ಪ್ರಾಸಾ.1 ರಿಂದ 5 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ನೋಡಿದಾಗ ಅಭಿಯೋಜನೆಯು ದೋಷಾರೋಪಣೆ ಪಟ್ಟಿಯಲ್ಲಿ ಹೇಳಿರುವ ಆರೋಪಣೆಗಳನ್ನು ಆರೋಪಿ ಎಸಗಿದ್ದಾರೆ ಎಂದು ನಿಸ್ಸಂಶಯತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂದು ಅಭಿಪ್ರಾಯಪಟ್ಟು 1 ಮತ್ತು 2 ನೇ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**15. ಅಂಶ 3 :-** ಈ ಮೇಲೆ ಚರ್ಚಿಸಿದಂತೆ ಅಭಿಯೋಜನೆಯು ಆರೋಪಿ ಈ ಮೇಲೆ ಹೇಳಿದ ಆರೋಪಣೆಗಳಂತೆ ಅಪರಾಧ ಎಸಗಿದ್ದಾರೆ ಎಂದು ರುಜುವಾತುಪಡಿಸಲು ವಿಫಲವಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

## :: ಆದೇಶ ::

**ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ. 14 ಮತ್ತು 15 ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ 32(1) ಮತ್ತು 38(ಎ) ರಡಿಯಲ್ಲಿ**

ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಜಾಮೀನು ಹಾಗೂ ಬಂಧ ಪತ್ರವನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳಿಸಲು ಆದೇಶಿಸಿದೆ.

ಮುದ್ದೆಮಾಲು.1 ಬೆಲೆಬಾಳದೇ ಇರುವುದರಿಂದ ಅವುಗಳನ್ನು ಅಪೀಲು ಕಾಲಾವಧಿ ಮುಗಿದ ನಂತರ ನಾಶಮಾಡತಕ್ಕದ್ದು.

(ಈ ಮೇಲಿನ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ಆನಂತರ ಓದಿ ತಿದ್ದಿ ಇಂದು ಅಂದರೆ ದಿನಾಂಕ: 02 ನೇ ಏಪ್ರಿಲ್ ಮಾಹೆ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ)

(ಶ್ರೀಮತಿ. ಕುಸುಮ.ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

## :: ಅನುಬಂಧ ::

**ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರುಗಳ ವಿವರ**

| | | |
|---|---|---|
| ಪ್ರಾ.ಸಾ.1 | : | ಅನಿತ.ಎಂ.ಜೆ |
| ಪ್ರಾ.ಸಾ.2 | : | ಕಾಂತರಾಜು |
| ಪ್ರಾ.ಸಾ.3 | : | ಮಧು |
| ಪ್ರಾ.ಸಾ.4 | : | ಅಭಿಲಾಷ್.ಕೆ |
| ಪ್ರಾ.ಸಾ.5 | : | ರೂಪ |

**ಅಭಿಯೋಜನೆ ಪರ ಗುರುತಿಸಲ್ಪಟ್ಟ ದಾಖಲಾತಿಗಳ ವಿವರ:**

| | | |
|---|---|---|
| ನಿಪಿ.1 | : | ಶೋಧನಾ ಸಮುಚ್ಚಯ |
| ನಿಪಿ.1(ಎ, ಬಿ, ಸಿ) | : | ಸಹಿಗಳು |
| ನಿಪಿ.2 | : | ಅಮನತ್ತು ಮಹಜರ್ |
| ನಿಪಿ.2(ಎ, ಬಿ, ಸಿ, ಡಿ) | : | ಸಹಿಗಳು |
| ನಿಪಿ.3 | : | ಮಾದರಿ ಸೀಲು |
| ನಿಪಿ.3(ಎ, ಬಿ, ಸಿ) | : | ಸಹಿಗಳು |
| ನಿಪಿ.4 | : | ಮಾದರಿ ಚೀಟಿ |

| | | |
|---|---|---|
| ನಿಪಿ.4(ಎ) | : | ಸಹಿ |
| ನಿಪಿ.5 | : | ಪ್ರಥಮ ವರ್ತಮಾನ ವರದಿ |
| ನಿಪಿ.5(ಎ) | : | ಸಹಿ |
| ನಿಪಿ.6 | : | ನೋಟೀಸ್ |
| ನಿಪಿ.6(ಎ) | : | ಸಹಿ |
| ನಿಪಿ. 7 | : | ಪ್ರಾಸಾ.2 ರವರ ಹೇಳಿಕೆ |
| ನಿಪಿ.8 | : | ಪಂಚರು |
| ನಿಪಿ.8(ಎ) | : | ಸಹಿ |
| ನಿಪಿ.9 | : | ಪ್ರಾಸಾ.3 ರವರ ಹೇಳಿಕೆ |
| ನಿಪಿ.10 | : | ಎಫ್.ಎಸ್.ಎಲ್‌ನ ಮನವಿ ಪತ್ರ |
| ನಿಪಿ.10 (ಎ) | : | ಸಹಿ |
| ನಿಪಿ.11 ರಿಂದ 14 | : | ಮನವಿ ಪತ್ರಗಳು |
| ನಿಪಿ.11(ಎ ಮತ್ತು 13 ಎ) | : | ಸಹಿ |
| ನಿಪಿ.15 | : | ಎಫ್.ಎಸ್.ಎಲ್ ವರದಿ |

<u>ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರುಗಳ ವಿವರಃ</u>

- ಇಲ್ಲಾ -

<u>ಆರೋಪಿತರ ಪರ ನಿಶಾನೆಯಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರಃ</u>

- ಇಲ್ಲಾ -

<u>ಅಭಿಯೋಜನೆ ಪರ ಗುರುತಿಸಲ್ಪಟ್ಟ ಮುದ್ದೆಮಾಲುಗಳ ವಿವರಃ</u>

ಮು.ಮಾ. 1 : 56 ಟೆಟ್ರಾ ಪ್ಯಾಕೇಟ್‌ಗಳು

(ಶ್ರೀಮತಿ. ಕುಸುಮ.ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು
(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಇಡಲಾಗಿದೆ)

**ಃ ಆದೇಶ ಃ**

**ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ.14 ಮತ್ತು 15 ನಿಯಮಗಳನ್ನು ಉಲ್ಲಂಘಿಸಿ, ಇದೇ ಕಾಯ್ದೆ 32(1) ಮತ್ತು 38(ಎ) ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ಜಾಮೀನು ಹಾಗೂ ಬಂಧ ಪತ್ರವನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳಿಸಲು ಆದೇಶಿಸಿದೆ.**

**ಮುದ್ದೆಮಾಲು.1 ಬೆಲೆಬಾಳದೇ ಇರುವುದರಿಂದ ಅದನ್ನು ಅಪೀಲು ಕಾಲಾವಧಿ ಮುಗಿದ ನಂತರ ನಾಶಮಾಡತಕ್ಕದ್ದು.**

(ಶ್ರೀಮತಿ. ಕುಸುಮ.ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಚನ್ನರಾಯಪಟ್ಟಣ.